ಕುಂದಾಪುರದ್ದು ಹವ್ಯಕ ಬಂದಿದೆ. ಮತ್ಯಾವುದಾದರೂ ಬಂದಿದೆಯೋ ಇಲ್ಲವೋ ನೆನಪಿಗೆ ಬರುತ್ತಿಲ್ಲ. ತೆಲುಗಿನಲ್ಲಿ 'ಮಾಂಡಲೀಕಾಲು' ಅಂತ ಕರೀತಾರೆ. ನಮ್ಮಲ್ಲಿ ಉಪಭಾಷೆ ಅಂತೀವಿ. ನಾನು ಒಳಭಾಷೆ ಅಥವಾ ಒಳನುಡಿ ಅಂತ ಕರೆಯೋಕೆ ಇಷ್ಟ ಪಡ್ತೀನಿ. ತೆಲುಗಿನಲ್ಲಿ ಜಿಲ್ಲಾವಾರು ಮಾಂಡಲೀಕಾಲು ಅಂತ 1968ರ ಆಸುಪಾಸಿನಲ್ಲೇ ನಿಘಂಟುಗಳು ಬಂದಿವೆ. ನಗರದಲ್ಲಿ ಬೆಳೆದಂತಹ ಲೇಖಕರಿಗೆ ಅವರ ಹಿಂದಿನ ಭಾಷೆ ಅಂದರೆ ಆಗಲೇ ಹೇಳಿದ ಹಾಗೆ ತಾಯಿಯ ಭಾಷೆ ಸಿಕ್ಕಿರಲ್ಲ. ಅಂತಹ ಲೇಖಕರು ಈ ನಿಘಂಟುಗಳನ್ನು ಗಮನಿಸಿ ತಾವು ಬಾಲ್ಯದಲ್ಲಿ ಕೇಳಿದಂತಹ ಶಬ್ದಗಳನ್ನು 'ಮರುಕರೆ' ಮಾಡಿಕೊಳ್ಳುವ ಸಾಧ್ಯತೆಯಿರುತ್ತದೆ.

ತೆಲಂಗಾಣ ಅಂತ ವಿಭಜನೆ ಆದ ಮೇಲೆ ಸಂಪೂರ್ಣವಾಗಿ ಆ ಭಾಷೆಯನ್ನೇ ಬಳಸುವಂತಹ ಪ್ರಯತ್ನಗಳು ಬಹಳ ನಡೆಯುತ್ತಿವೆ. ಹಾಗೆ ನೋಡಿದರೆ ತೆಲಂಗಾಣಕ್ಕೆ ಹೋಲಿಸಿದರೆ ಆಂಧ್ರದಲ್ಲಿ ಮಾಂಡಲೀಕ ಸಾಂಸ್ಕೃತಿಕ ಶಬ್ದಗಳು ಕಡಿಮೆ ಇವೆ. ಯಾಕೆ ಅಂದ್ರೆ ಆಂಧ್ರದಲ್ಲಿ ಇಂಗ್ಲೀಷಿನ ಪ್ರಭಾವ ಹೆಚ್ಚಿಗಿದೆ. ತೆಲಂಗಾಣದಲ್ಲಿ ನಿಜಾಮರ ಆಡಳಿತ ಕಾಲದಲ್ಲಿ ಬಂದಂತಹ ಉರ್ದು ಶಬ್ದಗಳು ಮತ್ತು ಪಾರ್ಸಿ ಶಬ್ದಗಳು, ಆ ನೆಲದ್ದೇ ಆದಂತಹ ಶಬ್ದಗಳು ನನ್ನಯ್ಯನ ಕಾಲದಿಂದಲೂ ಕೂಡಿಕೊಂಡು ಅಲ್ಲಿನ ಸಾಹಿತ್ಯವನ್ನು ಕಟ್ಟುತ್ತಾ ಇದಾವೆ. ಇದನ್ನೆಲ್ಲಾ ಗಮನಿಸಿದಾಗ ನನಗೆ ಅನಿಸಿದ್ದು ಇದೇ ಥರ ಸಮರ್ಥವಾಗಿದೆಯಲ್ಲ ಮೊರಸುನಾಡು ಕನ್ನಡ; ಒಂದು ನಿಘಂಟು ಯಾಕೆ ಮಾಡಬಾರದು ಅಂತ ಅನಿಸ್ತು. ನಿಘಂಟು ಮಾಡೋದಕ್ಕೆ ಈ ಜಿಲ್ಲೆಯೊಳಗೆ ಸಾಹಿತ್ಯದ ಆಕರಗಳಿಲ್ಲ. ಆವಾಗಲೆ ನೀವು ಹೇಳಿದ ಹಾಗೆ ಎರಡುಮೂರು ಪುಸ್ತಕಗಳನ್ನು ಹೊರತುಪಡಿಸಿ. ಆದರೆ ಅದರಲ್ಲಿ ಎಲ್ಲಾ ಪುಸ್ತಕಗಳಲ್ಲೂನು ನಿಘಂಟುಗೆ ಬೇಕಾದ ರೀತಿಯ ಶಬ್ದಗಳನ್ನು ಬಳಸಿಲ್ಲ. ಅಂದರೆ ಏನೋ ಒಂದು ಬದಲಾವಣೆ ಮಾಡಿಕೊಂಡು ರಚನೆಗೊಂಡಿರುವಂತವು. ಉದಾಹರಣೆಗೆ, ಈಗ 'ಋಣ' ಅನ್ನೋ ಕಾದಂಬರಿಯಲ್ಲಿ ಬಹಳ ಕ್ಲಿಷ್ಟಕರವಾಗಿ ಸಮಾಸಗಳನ್ನ ಬಳಸಲಾಗಿದೆ. ಮತ್ತು ಮಹಾಪ್ರಾಣಗಳನ್ನು ವಿಪುಲವಾಗಿ ಬಳಸಲಾಗಿದೆ. ನಮ್ಮ ಮೊರಸುನಾಡು ಒಳಗೆ ಮಹಾಪ್ರಾಣಗಳು ಇಲ್ಲವೇ ಇಲ್ಲ ಅನ್ನೋ ರೀತಿ ಇದೆ. ಹಾಗಾಗಿ ಅದು ನನಗೆ ಪ್ರಾಮಾಣಿಕ ಭಾಷೆ ಅಂತ ಅನಿಸಲಿಲ್ಲ. ಇನ್ನು ನಿಮ್ಮ 'ನಾಗ್ದಾಳೆ'ಯನ್ನ ನಿಘಂಟು ರಚನೆಯ ಸಂದರ್ಭದಲ್ಲಿ ಗಮನಿಸಿದ್ದೇನೆ. ಹೀಗೆ ಕೆಲವು ಪುಸ್ತಕಗಳು ನಿಘಂಟು ರಚನೆಯ ಸಂದರ್ಭದಲ್ಲಿ ಉಪಯುಕ್ತ ಅನಿಸಿದ್ದರೆ ಇನ್ನೂ ಕೆಲವು ನನ್ನನ್ನು ಒಪ್ಪಿಸುವಲ್ಲಿ ಸೋತಿವೆ. ನನಗೆ ಆಡುಭಾಷೆ ಬೇಕಿತ್ತು. ಸುತ್ತಾಡಿದೆ. ಜಾತ್ರೆ, ಸಂತೆ, ಹೊಲ-ಗದ್ದೆ, ಅಂಗಡಿ, ಹೀಗೆ ಊರೂರು ಸುತ್ತಾಡಿದೆ. ಬೀದಿ ಹಾಡುಗಾರರನ್ನ ಹಿಂಬಾಲಿಸಿದೆ. ಬಹಳ ಕಷ್ಟ ಆಗೋದು ಕೆಲವು ಪದಗಳನ್ನ ನೆನಪಿನಲ್ಲಿ ಇಟ್ಟುಕೊಳ್ಳಲು. ಟಿಪ್ಪಣಿ ಮಾಡಿಕೊಳ್ಳಲೂ ಸಹ ಆಗದಂತಹ ಪರಿಸ್ಥಿತೀಲಿ ಬಹಳ ವೇಳೆ ಇದ್ದೆ. ಯಾರಾದರೂ ಒಬ್ಬರು ಪ್ರಾರಂಭ ಮಾಡಬೇಕಲ್ಲ? ನಾನೇ ಯಾಕಾಗಬಾರದು ಅಂತ ಶುರುಮಾಡಿದೆ. ಇನ್ನು ಹತ್ತು ವರ್ಷ ಕಳೆದರೆ ಬಹಳ ಪದಗಳು ನಮಗೆ ಸಿಗದೆ ಹೋಗಬಹುದು. ಈಗಾಗಲೇ ಸಾಕಷ್ಟು ಪದಗಳನ್ನು ಕಳೆದುಕೊಂಡಿದ್ದೇವೆ ಅಂತ ಹತ್ತು ವರ್ಷಗಳ ಹಿಂದೆಯೇ ನನಗೆ ಅನಿಸಿತ್ತು. ಹಾಗಾಗಿ ನನ್ನ ಎಲ್ಲ ಸುತ್ತಾಟ, ಬಾಲ್ಯದಲ್ಲಿ ಈ ಜಿಲ್ಲೆ ನನಗೆ ಕೊಟ್ಟಂತಹ ಪದ ಸಂಪತ್ತು, ಈ ಎಲ್ಲ ನೆರವಿನಿಂದ 'ಮೊರಸುಗನ್ನಡ ನಿಘಂಟು' ರಚಿಸಲು ನನಗೆ ಸುಮಾರು ಹನ್ನೆರಡು ವರ್ಷ ಹಿಡೀತು. ಆದರೆ ಪರಿಪೂರ್ಣ ಅಲ್ಲ ಅದು; ಕೇವಲ ಪ್ರಾರಂಭ. ಇಲ್ಲಿ ನಾನು ಶಾಸ್ತ್ರೀಯ ನಿಘಂಟುಗಳಿಗೆ ಗಮನಿಸಬೇಕಾದಂತಹ ಅಂಶಗಳನ್ನು ಪರಿಗಣಿಸಲು ಸಾಧ್ಯವಿಲ್ಲ. ಯಾಕೆ ಅಂದ್ರೆ ವ್ಯುತ್ಪತ್ತಿ ಕಡೆಗೆ ಹೋಗಬೇಕಾಗುತ್ತೆ. ಯಾವಾಗ ಯಾರು ಯಾವ ಸಂದರ್ಭದಲ್ಲಿ ಬಳಸ್ತಾರೆ ಅನ್ನೋದು ಮುಖ್ಯ ಆಗ್ಬೇಕಲ್ಲ. ಇಲ್ಲಿ ಒಂದೊಂದು ಜಾತಿಯವರದ್ದೂ ಒಂದೊಂದು ಭಾಷೆ. ಬಹಳ ಭಿನ್ನ ಇದೆ. ತಳವರ್ಗದವರು ಬಳಸುವ ಭಾಷೆಯ ಶಬ್ದಗಳು ಸಂಪೂರ್ಣವಾಗಿ ಬದಲಾಗ್ತವೆ. ಅದನ್ನೆಲ್ಲಾ ಹಿಡಿಯೋದೆ ಒಂದು ದೊಡ್ಡ ಸವಾಲಾಗಿತ್ತು. ದೊಡ್ಡಮಟ್ಟದ ಯೋಜನೆಯಲ್ಲಿ ಆಗಬೇಕಾದಂತಹ ಕೆಲಸ ಏಕವ್ಯಕ್ತಿ ಪ್ರಯತ್ನದಲ್ಲಿ ನಡೀತಿದೆ. ಹಾಗಾಗಿ ನಾನು ಎಲ್ಲವನ್ನೂ ತಾಕುವ ಪ್ರಯತ್ನವನ್ನಷ್ಟೆ ಮಾಡಿದ್ದೇನೆ. ಮತ್ತು ಇದು ಮುಂದೆ ಕೆಲಸ ಮಾಡುವಂತವರಿಗೆ ಆಕರ ಗ್ರಂಥವಾಗಲಿದೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಅಷ್ಟರಮಟ್ಟಿಗೆ ನನಗೆ ತೃಪ್ತಿ ಇದೆ.

ಒಬ್ಬರು ಸ್ನೇಹಿತರು ಒಮ್ಮೆ ಹೇಳಿದ್ದರು, ಇವನಿಗೆ